ಅಪಾರ್ಟ್‌ಮೆಂಟಲ್ಲಿ ಬಾಡಿಗೆಗೆ ಹೋಗೋಣ...' 'ಆಡಿ ತಗಳ್ಳೋಣವೆ?' 'ಬೇಡ, ಅದು ನಿನ್ನಂತ ಹುಡುಗೀಯರಿಗೇ ಸರಿ– ಬೀಎಂಡಬ್ಲ್ಯೂ ತಗಳೋಣ...'

ಆಮೇಲೆ ಏನೂ ಕೊಳ್ಳದೆ ಮ್ಯಾಕ್ಡೊನಾಲ್ಡಿನಲ್ಲಿ ಬೇಕಾದ್ದು ತಿಂದು–ಕುಡಿದು ನಿದ್ದೆಯಲ್ಲಿ ಸುಮ್ಮನಾಗುತ್ತಿದ್ದರು. ಸ್ವಲ್ಪವೇ ಗಂಭೀರವೆನ್ನಬಹುದಾದ ಜಗಳವೆಂದರೆ ತೀರಾ ಇತ್ತೀಚಿನದು:

ಪೂಂಗವನಮ್‌ಗೆ ತನ್ನ ಗೆಳತಿಯೊಬ್ಬಳ ಫೋಟೊ ಕಳಿಸಿ, ಮದುವೆ ಆಗು ಎಂದು ಪೀಡಿಸುತ್ತಿದ್ದ ಸುದೀಪ್ತಾಳಿಗೆ ಮೊದಲು, ಹಾಗೆ ಒತ್ತಾಯಿಸುವುದು ಒಳ್ಳೆಯದಲ್ಲ ಎಂದಷ್ಟೆ ಹೇಳುತ್ತಿದ್ದ ಋತ, ಒಮ್ಮೆ ಅದು ಅಸಭ್ಯತೆ ಎಂದ; ಇನ್ನೊಮ್ಮೆ ಅನಾಗರಿಕತೆ ಎಂದು ಹೇಳಿ ಬೇಕೆಂದೇ ಕಾಲುಕೆರೆದ. "ಅವನು ನಿನ್ನಷ್ಟು ಅಲ್ಲದಿದ್ದರೂ ನನಗೂ ಒಳ್ಳೆಯ ಗೆಳೆಯ ಕಣಪ್ಪಾ; ಸಲುಗೆಯಲ್ಲಿ ನಾನು ಹೇಳಬಹುದಾದ್ದನ್ನು ಹೇಳಿದ್ದೇನೆ–ಅದನ್ನು ಸದೆಬಡಿಯೋದು ಮನುಷ್ಯತ್ವ ಅನ್ನಿಸಿಕೊಳ್ಳೋಲ್ಲ!" "ಆಯ್ತು, ನಾನು ಪಶು ಅಂತಾನೆ ಇಟ್ಕೊ. ಆದ್ರೆ, ಅವನ ಬಗ್ಗೆ ನನಗೆ ಗೊತ್ತಿರೋವಷ್ಟು ನಿಂಗೆ ಗೊತ್ತಿಲ್ಲ. "ಮತ್ತೆ ಅದೇ ಪುರಾಣ: ಅವನಿಗೆ ಹುಟ್ಟಿನಿಂದಲೇ ವಾಸಿಮಾಡಲಾಗದ ಹೃದಯದ ತೊಂದರೆ ಇದೆ; (ಅದಕ್ಕೆ ಏನೋ ಹೆಸರೂ ಹೇಳಿದ್ದೆ–ನೆನಪಾಗ್ತಿಲ್ಲ) ಅವನು ಉದ್ವೇಗಕ್ಕೆ ಒಳಗಾಗುವ ಯಾವುದೇ ಕ್ಷಣವೂ ಮಾರಣಾಂತಿಕ ಆಗಬಹುದು. ಮದುವೆ ಆಗುವುದು ಜೀವಕ್ಕೆ ಖಂಡಿತಾ ಅಪಾಯಕಾರಿ. ಯೂ–ಟ್ಯೂಬನ್ನೋ, ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಪೋಸ್ಟನ್ನೋ ನೋಡಿ ಮಾತಾಡಬೇಡ. ಭ್ರೂಣದಲ್ಲೇ ಹೃದಯ ಚಿಕಿತ್ಸೆಯ ಕಾಲ ಇದು."

> **ಇತ್ತ, ಪೂಂಗವನಮ್ ಭಾರತಕ್ಕೆ ಬರುವ ಮಾತಿರಲಿ, ಆಪರೇಷನ್ ಥಿಯೇಟರಿನಿಂದಲೂ ಹೊರಬರಲಿಲ್ಲ; ಆಪರೇಷನ್ ನಂತರದ ಅವನ ಹೃದಯ ಸ್ವಲ್ಪ ಹೊತ್ತು ಬಡಿದುಕೊಂಡಿತಾದರೂ, ಕೊನೆಗೆ ಸುಮ್ಮನಾಗಿಬಿಟ್ಟಿತು.**

ಎರಡನೆ ಬಾರಿ ನಡೆದ ಇನ್ನೂ ಸ್ವಲ್ಪ ಕಾವಿನ ಜಗಳವೆಂದರೆ, ಸುದೀಪ್ತಾ ತನ್ನ ಕಂಪನಿಯಿಂದ ಅಮೆರಿಕಾಕ್ಕೆ ಒಂದು ವರ್ಷದ ಒಪ್ಪಂದದ ಮೇರೆ ಹೋಗುವ ಬಗ್ಗೆ ನಡೆದದ್ದು. ಅವಳು ಹಟದಿಂದ ಹೋಗುತ್ತೇನೆಂದಾಗ, ಗಂಟಲು ಬಿಗಿದುಕೊಂಡು ಸಿಟ್ಟೋ–ಸಂಕಟವೋ ಗೊತ್ತಾಗದ ಏರು ಧ್ವನಿಯಲ್ಲಿ ಹೇಳಿದ್ದ: "ನಂಗೆ ಒಬ್ಬಂಟಿಯಾಗಿ, ಒಂದು ಕೂಸೂ ಇಲ್ಲದ ಈ ಮನೆಯಲ್ಲಿ ಇರೋದಕ್ಕೆ ಆಗೋಲ್ಲ."

ಈ ಮಾತಿನ ಒಳಪೆಟ್ಟು ಅವಳನ್ನು ಕೆರಳಿಸಿತು. ಆಗ, ಅವಳ ಬಾಯಿಯಿಂದ ಜಾರಿದ ಮಾತೊಂದು ಋತನಿಗೆ ಮರ್ಮಾಘಾತಕವಾಗಿತ್ತು: "ಈ ಜನ್ಮದಲ್ಲಿ ನೀನು ಕೂಸನ್ನ ಕಾಣೋಲ್ಲ, ಬಿಡು." ಅದು ಕೊನೆಗೆ ಏನೇನೋ ಆಗಿ, ಅವಳು ಅಮೆರಿಕಾಕ್ಕೆ ಹೋಗಲಿಲ್ಲ. ಋತ ಮತ್ತು ಸುದೀಪ್ತಾ ಇವರ ನಡುವಣ ಮೂರನೆಯ ಮತ್ತು ಕೊನೆಯ ಜಗಳ ಮೊನ್ನೆಮೊನ್ನೆಯದ್ದು:

ಸುದೀಪ್ತಾ ಅಮೆರಿಕಕ್ಕೆ ಬರುತ್ತಿಲ್ಲವೆಂಬ ಸುದ್ದಿಗೆ ತನಗಾದ ಬೇಸರ ಮತ್ತು ನಿರಾಶೆಯನ್ನು ಪೂಂಗವನಮ್ ವ್ಯಕ್ತಪಡಿಸಿದ್ದ; ಮತ್ತೂ, ಅವಳ ಸಹಾಯವನ್ನು ಈ ಜನ್ಮದಲ್ಲಿ ತಾನು ತೀರಿಸಲಾರೆನೆಂದೂ ಬೋಲ್ಡ್ ಮಾಡಿ ಕಳಿಸಿದ್ದ. ಅವನು ಗಂಡ ಹೆಂಡತಿಯರಿಬ್ಬರಿಗೂ ಒಂದೇ ಸಂದೇಶವನ್ನು ಕಳಿಸಿದ್ದರೂ ಋತ ಅದನ್ನು ನೋಡಿದ್ದು ಮಾತ್ರ ಎರಡು ದಿನದ ನಂತರ. ಆಮೇಲೂ ಒಂದು ದಿನ ಸುದೀಪ್ತಾಳೇ ಈ ವಿಷಯ ಪ್ರಸ್ತಾಪಿಸಲಿ ಎಂದು ಕಾದು, ನಾಲ್ಕನೆಯ